ಅ.ದಾ. 126/2020 ಡಿಡಬ್ಲ್ಯೂ-1

ದಿನಾಂಕಃ 03.07.2025 ರಂದು ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲು: ವಾದಿ ಪರ ಶ್ರೀ ಕೆ.ಎಸ್.ಎ. ವಕೀಲರಿಂದ:**

ಮರುವಿಚಾರಣೆಯ ಕಾಲದಲ್ಲಿ ಯಾವ ದಾಖಲಾತಿಗಳು ಮತ್ತು ಎಷ್ಟು ದಾಖಲಾತಿಗಳನ್ನು ಹಾಜರುಪಡಿಸಿರುತ್ತೇನೆಂದು ನೆನಪಿಲ್ಲ. ಸದರಿ ದಾಖಲಾತಿಗಳು ವಾದಿ, ನಮ್ಮಗಳ ಮತ್ತು ಇತರೆ ಮಂಜೂರುದಾರರಿಗೆ ಸಂಬಂಧಪಟ್ಟಂತಹ ದಾಖಲಾತಿಗಳಾಗಿರುತ್ತವೆ. ಸದರಿ ದಾಖಲಾತಿಗಳು ಯಾವುದರ ಕುರಿತು ನೀಡಲಾಗಿರುತ್ತದೆ ಎಂಬುದರ ಮಾಹಿತಿ ಇರುವುದಿಲ್ಲ. ಸದರಿ ದಾಖಲಾತಿಗಳು ಕನ್ನಡ ಮತ್ತು ಇಂಗ್ಲೀಷ್ ಭಾಷೆಯಲ್ಲಿ ಇರುತ್ತವೆ. ನಾನು ಮರುವಿಚಾರಣೆಯಲ್ಲಿ ನೀಡಿದಂತಹ ದಾಖಲೆಗಳಲ್ಲಿ ನನ್ನ ಹೆಸರು ಇರುವುದಿಲ್ಲ. ನಾನು ನೀಡಿದಂತಹ ದಾಖಲಾತಿಗಳು ಸ.ನಂ.79 ಕ್ಕೆ ಸಂಬಂಧಪಟ್ಟದ್ದಾಗಿರುತ್ತದೆ. ಸದರಿ ಸ.ನಂ. ಗೆ ಸಂಬಂಧಿಸಿದಂತೆ ಇತರೆ ದಾಖಲಾತಿಗಳನ್ನು ಹಾಜರುಪಡಿಸಿರುವ ಕುರಿತು ನೆನಪಾಗುತ್ತಿಲ್ಲ. ನಾನು ನೀಡಿದಂತಹ ದಾಖಲಾತಿಗಳಲ್ಲಿ ಗಡಿ ಗುರುತಿನ ಬಗ್ಗೆ ನಮೂದಿಸಲಾಗಿರುತ್ತದೆ. ಪ್ರಸ್ತುತ ದಾವೆಯನ್ನು ಹೂಡುವ ಕಾಲದಲ್ಲಿ ದಾವಾ ಸ್ವತ್ತಿನ ಪಕ್ಕಾ ಪೋಡಿ ಆಗಿರುವುದಿಲ್ಲ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಸದರಿ ವಿಷಯ ನನಗೆ ಇತ್ತೀಚೆಗೆ ಗಮನಕ್ಕೆ ಬಂದಿರುತ್ತದೆ ಎಂದು ನುಡಿಯುತ್ತಾರೆ. ವಾದಿಯವರ ಹೆಸರಿಗೆ ಪಕ್ಕಾ ಪೋಡಿಯಾದ ಕುರಿತು ನಾನು ಎಲ್ಲಿಯೂ ಪ್ರಶ್ನಿಸಿರುವುದಿಲ್ಲ. ಸಾಮಾನ್ಯವಾಗಿ ಒಬ್ಬ ವ್ಯಕ್ತಿ ಸ್ವತ್ತಿನ ಸ್ವಾಧೀನವನ್ನು ಹೊಂದಿದ್ದಲ್ಲಿ ಅವರ ಹೆಸರಿಗೆ ಪಕ್ಕಾ ಪೋಡಿಯಾಗುತ್ತದೆ ಎಂದರೆ ಸರಿಯಲ್ಲ.

ಸಾಮಾನ್ಯವಾಗಿ ಒಬ್ಬ ವ್ಯಕ್ತಿ ಸ್ವಾಧೀನ ಹೊಂದಿಲ್ಲದಿದ್ದರೆ ಅವರ ಹೆಸರಿಗೆ ಪಕ್ಕಾ ಪೋಡಿ ಮಾಡಲಾಗುವುದಿಲ್ಲ ಎಂದು ಹಿಂಬರಹ ನೀಡಲಾಗುತ್ತದೆ ಎಂದರೆ ಸರಿಯಲ್ಲ. ನನ್ನ ಹೆಸರಿಗೆ 3 ಎಕರೆ ಜಮೀನು ಇದೆ ಎನ್ನಲಾದ ಸ್ವತ್ತಿಗೆ ಪಕ್ಕಾ ಪೋಡಿ ಮಾಡಿಸಿರುವುದಿಲ್ಲ. ನಾನು ಹಾಜರುಪಡಿಸಿರುವ ದಾಖಲಾತಿಗಳು ನನ್ನ ಸ್ವತ್ತಿಗೆ ಸಂಬಂಧಿಸಿದ ಕಾರಣ ನಾನು ಹಾಜರುಮಾಡಿರುತ್ತೇನೆ. ಸಾಕ್ಷಿಗೆ ಒಂದು ದಾಖಲಾತಿಯನ್ನು ತೋರಿಸಲಾಗಿ ಅದು ಅಸಲು ದಾವಾ 119/2020 ಕ್ಕೆ ಸಂಬಂಧಿಸಿದ ಆದೇಶದ ಪ್ರತಿ ಎಂದರೆ ಸಾಕ್ಷಿಯು ಒಪ್ಪಿದ್ದು, ಸದರಿ ದಾಖಲಾತಿಯನ್ನು ನಿಪಿ-12 ಎಂದು ಗುರುತಿಸಲಾಯಿತು. ಸದರಿ ಆದೇಶವನ್ನು ನಾನು ಎಲ್ಲಿಯೂ ಪ್ರಶ್ನಿಸಿರುವುದಿಲ್ಲ. ನಾನು ಅನಗತ್ಯವಾಗಿ ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

ಸಹಿ/-

ಸಾಕ್ಷಿ ಸಹಿಃ

ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಪ್ರದನ್ಯಾದಂ.,
ಮೂಡಿಗೆರೆ.